


# ಸಂಯುಕ್ತತತ್ತ್ವ

24 ಏಪ್ರಿಲ್ 2024


BAHUTVA KARNATAKA

TEN YEARS OF NDA • A GUARANTEE CHECK •

**ಸಂವಿಧಾನದ ಮೊದಲನೇ ಪರಿಚ್ಛೇದವು ಭಾರತವನ್ನು ರಾಜ್ಯಗಳ ಒಕ್ಕೂಟ ಎಂದು ತಿಳಿಸಿದೆ.**
**ಒಕ್ಕೂಟ ಎಂಬ ಪದವನ್ನು ಸಂವಿಧಾನದಲ್ಲಿ ಬಳಸಿಲ್ಲ, ಆದರೆ ರಾಜ್ಯಗಳ ಒಕ್ಕೂಟ (ಅಂದರೆ ಫೆಡರೇಶನ್) ಎಂಬಲ್ಲಿ ಈ ತತ್ವವನ್ನು, ಏಕಾತ್ಮಕ ವ್ಯವಸ್ಥೆ ಯಿಂದ ಬೇರೆಯಾಗಿ ಗುರುತಿಸಲಾಗಿದೆ.**

"ಒಕ್ಕೂಟ ವ್ಯವಸ್ಥೆ (ಫೆಡರಲ್ ವ್ಯವಸ್ಥೆ) ಯ ಮೂಲ ತತ್ತ್ವ ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸಕಾಂಗ ಹಾಗೂ ಕಾರ್ಯಾಂಗಗಳ ಅಧಿಕಾರವು ವಿಭಜಿತವಾಗಿರುವುದು. ಇದು ಕೇಂದ್ರವು ಮಾಡುವ ಯಾವುದೇ ಕಾನೂನಿನಿಂದಲ್ಲ, ಬದಲಿಗೆ ಸಂವಿಧಾನವೇ ಮಾಡಿರುವುದು."

"ಕೇಂದ್ರವನ್ನು ಸಶಕ್ತಗೊಳಿಸುವ ಯಾವುದೇ ಪ್ರವೃತ್ತಿಯನ್ನು ನಾವು ಪ್ರತಿರೋಧಿಸಬೇಕು. ಅದಕ್ಕೆ ಜೀರ್ಣಮಾಡಿಕೊಳ್ಳಲು ಆಗುವಷ್ಟು ಮಾತ್ರ ಸೇವಿಸಬೇಕು. ತೂಕಕ್ಕೆ ತಕ್ಕ ಬಲವಿರಬೇಕು."



I have read experts on constitutions and one of the accepted tests whether a country enjoys freedom is to see how far the units and the local bodies enjoy freedom and autonomy.[...]

It is a sad commentary upon the psychology of most of us that we completely ignore the provincial legislatures and the people in the provinces, and attribute all virtues to the Centre and to the Government that exists in Delhi. [...] It is a sad commentary, as I said before, on us that forgetting these facts we decry the regimes in the provinces and the provincial legislatures every time and praise the Government here to the skies. That is a psychology which will ultimately work to uproot democracy in this country.

Having said this, I would like to point out that when we were fighting for freedom one of the principles on which we concentrated our mind upon in constitution-making was decentralisation of power. In this vast country, centralisation will ultimately work to the detriment of what we call "unity" itself. It is impossible for any human being or any Government to control effectively all the administration from Cape Comorin to the Himalayas. Decentralisation is a necessity. – **Kengal Hanumanthaiah**

Art: Constitution of India (16)
Text: Constituent Assembly Debates (15 Nov 1949)

– ಬಿ ಆರ್ ಅಂಬೇಡ್ಕರ್

# ವಾಸ್ತವ

ಕೇಂದ್ರ ಸರ್ಕಾರದ ಅತಿಕ್ರಮಣ ಅಧಿಕಾರದಿಂದ ವಿಶಿಷ್ಟ ಭಾಷೆಗಳು, ಸಂಸ್ಕೃತಿಗಳು, ಚರಿತ್ರೆಗಳು ಮತ್ತು ಸಾಧನೆಗಳಿಂದ ಸ್ವಾಯತ್ತ ಸಂಸ್ಥೆಗಳಂತಿದ್ದ ರಾಜ್ಯಗಳ ಉಳಿವಿಗೇ ಈಗ ಗಂಭೀರ ಅಪಾಯ ಎದುರಾಗಿದೆ. ಅನೇಕ ರೀತಿಗಳಲ್ಲಿ ಇದು ಉಂಟಾಗಿರುವುದನ್ನು ನೋಡೋಣ.

ಪ್ರತಿಪಾದನೆ

# ರಾಷ್ಟ್ರದ ಪ್ರಗತಿಗೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಸಹಕಾರ ಬಹಳ ಮುಖ್ಯ

- ನರೇಂದ್ರ ಮೋದಿ, 2021

ವಾಸ್ತವ

# ಒಕ್ಕೂಟ ವ್ಯವಸ್ಥೆಯ ಶಿಥಿಲತೆ

ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರವು " ಡಬಲ್ ಎಂಜಿನ್ ಸರ್ಕಾರ " ಅಂದರೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಎರಡೂ ಕಡೆ ಬಿಜೆಪಿ ಆಡಳಿತ ಇರುವುದು ಆದರ್ಶ ಎಂಬಂತೆ ಹೇಳುತ್ತಲೇ ಇದೆ. ವಿರೋಧ ಪಕ್ಷದ ಆಡಳಿತದ ರಾಜ್ಯವಿರುವುದು ಅನನುಕೂಲ ಎಂಬ ಈ ಸೂಚ್ಯಾರ್ಥ ಭಾರತೀಯ ಸಂವಿಧಾನದ ಒಕ್ಕೂಟ ವ್ಯವಸ್ಥೆಯ ತತ್ವಗಳ ನೇರ ಉಲ್ಲಂಘನೆಯಾಗಿದೆ.

**ಕೇಂದ್ರ ಯೋಜನೆಗಳು : ಕುಂಠಿತಗೊಂಡ ರಾಜ್ಯಗಳ ಪಾತ್ರ, ಕೇಂದ್ರಕ್ಕೆ ಹೆಚ್ಚಿದ ಶ್ರೇಯ**

ಎನ್ ಆರ್ ಇ ಜಿ ಎ ಅಥವಾ ಆವಾಸ್ ಯೋಜನಾ ಗಳಂಥ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯಗಳೆರಡೂ ಧನ ಒದಗಿಸುತ್ತವೆ ಮತ್ತು ಅವುಗಳ ಅನುಷ್ಠಾನದ ಹೊಣೆ ರಾಜ್ಯ ಮತ್ತು ಸ್ಥಳೀಯ ಆಡಳಿತಗಳದ್ದಾಗಿರುತ್ತದೆ. ಆದರೆ,ಕಳೆದ ಹತ್ತು ವರ್ಷಗಳಲ್ಲಿ ನಿರ್ಧಾರಗಳನ್ನು ಮೇಲಿನಿಂದ ಹೇರಲಾಗುತ್ತಿದೆ. ಇದರಿಂದ ಸ್ಥಳೀಯ ಪುರಸಭೆಗಳ ಮತ್ತು ಗ್ರಾಮ ಸಭೆಗಳ ಕಾರ್ಯವ್ಯಾಪ್ತಿಯ ಮೇಲೆ ಋಣಾತ್ಮಕ ಪರಿಣಾಮ ಉಂಟಾಗಿದೆ.

ಉದಾಹರಣೆಗೆ, ಕೋವಿಡ್ ನಂತರದ ದಿನಗಳಲ್ಲಿ ಬೀದಿ ವ್ಯಾಪಾರಿಗಳ ಸಂಕಷ್ಟ ನಿವಾರಣೆಗೆ ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಯಲ್ಲಿ ಸಾಲ ನೀಡುವ ಕಾರ್ಯಕ್ರಮ  ಕೇಂದ್ರ ಸರ್ಕಾರದಿಂದ ಪ್ರಾರಂಭವಾಯಿತು. ಈ ಯೋಜನೆ ಮತ್ತು ಅನುಷ್ಠಾನ ಕೇಂದ್ರ ಸರ್ಕಾರದ ಹಿಡಿತದಲ್ಲಿದ್ದು ಪುರಸಭೆಗಳಿಗೆ ಅಥವಾ ರಾಜ್ಯ ಸರ್ಕಾರಗಳಿಗೆ ಯಾವುದೇ ಪಾತ್ರವಿಲ್ಲ. ಇದು ಮತ್ತೊಮ್ಮೆ ಒಕ್ಕೂಟ ನಿಯಮಗಳ ಉಲ್ಲಂಘನೆ ಮತ್ತು ಪರಿಣಾಮಕಾರಿ ಆಡಳಿತವನ್ನು ಶಿಥಿಲಗೊಳಿಸುವುದಕ್ಕೆ ಉದಾಹರಣೆಯಾಗಿದೆ. ಅಂತೆಯೇ, ಪ್ರಧಾನಮಂತ್ರಿ ಜನಾರೋಗ್ಯ ಯೋಜನೆಗೆ ಕರ್ನಾಟಕ ಸರ್ಕಾರ 77.97% ಕೊಡುಗೆ ನೀಡಿದರೂ ಕೇಂದ್ರಕ್ಕೆ ಎಲ್ಲ ಶ್ರೇಯವನ್ನು ನೀಡಲಾಗುತ್ತಿದೆ.

- ಕರ್ನಾಟಕ ಕಂದಾಯ ಸಚಿವ ಎಂ.ಆರ್.ಕೃಷ್ಣ ಬೈರೇಗೌಡ ಅವರ ಪ್ರಸ್ತುತಿ

# ವಾಸ್ತವ

**ನೋಟು ರದ್ದತಿ**
ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಜಸ್ಟಿಸ್ ನಾಗರತ್ನ ಅವರಿಂದ ಟೀಕೆಗೆ ಒಳಗಾದ ಈ ನೀತಿಯು ರಾಜ್ಯ ಸರ್ಕಾರಗಳ ಆರ್ಥಿಕತೆಗೆ ಬಲವಾದ ಪೆಟ್ಟು ನೀಡಿತು. ಇದನ್ನು ರಾಜ್ಯ ಸರ್ಕಾರಗಳ ಸಮಾಲೋಚನೆಯೊಂದಿಗೆ ಅನುಷ್ಠಾನಕ್ಕೆ ತರಬೇಕಿತ್ತು. ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ನಿರ್ಧಾರವನ್ನು ಕೈಗೊಂಡು ರಾಜ್ಯಗಳು ಆರ್ಥಿಕತೆಗೆ ಉಂಟಾದ ಧಕ್ಕೆಯನ್ನು ತಾವೇ ಎದುರಿಸಬೇಕಾಯಿತು.

**ಕೋವಿಡ್ ಸಾಂಕ್ರಾಮಿಕತೆ**
ರಾಜ್ಯಗಳಿಗೆ ಯಾವುದೇ ಪೂರ್ವ ಸೂಚನೆಯಿಲ್ಲದೇ ದೇಶಾದ್ಯಂತ ಹೇರಿದ ಲಾಕ್ ಡೌನ್ ನಿರ್ಧಾರವನ್ನೂ ಕೇಂದ್ರವೇ ಕೈಗೊಂಡು ರಾಜ್ಯಗಳು ಅದರ ಅಡ್ಡ ಪರಿಣಾಮಗಳನ್ನು ಎದುರಿಸುವಂತಾಯಿತು.

**ರಾಷ್ಟ್ರೀಯ ತನಿಖಾ ದಳ ಕಾಯ್ದೆ ತಿದ್ದುಪಡಿ**
2008 ರಲ್ಲಿ ಎಲ್ಲಾ ಪಕ್ಷಗಳ ಒಮ್ಮತದಿಂದ ಎನ್ ಐ ಎ ಅನ್ನು ಸ್ಥಾಪಿಸಲಾಯಿತು. 2019 ರಲ್ಲಿ ಈ ಕಾಯ್ದೆಗೆ ತಿದ್ದುಪಡಿ ಮಾಡಿ ಸ್ಫೋಟಕ ವಸ್ತುಗಳ ಕಾಯ್ದೆ ಅಡಿಯಲ್ಲಿನ ಅಪರಾಧಗಳಿಗೆ ಒಳಪಡುವ ಮಾನವ ಕಳ್ಳಸಾಗಣೆ, ಪ್ರತಿಬಂಧಿಸಿದ ಶಸ್ತ್ರಾಸ್ತ್ರ ಗಳ ತಯಾರಿಕೆ / ಮಾರಾಟ ಕಾಯ್ದೆ, ಸೈಬರ್ ಭಯೋತ್ಪಾದನೆ ಗಳನ್ನು ಸೇರಿಸಲಾಯಿತು. ಅನೇಕ ಸಂದರ್ಭಗಳಲ್ಲಿ ಈ ರೀತಿಯ ಅಪರಾಧಗಳು ರಾಷ್ಟ್ರೀಯ ಭದ್ರತೆಗೆ ಯಾವ ಸಂಬಂಧ ಹೊಂದಿರುವುದಿಲ್ಲ. ಅಂತಹುದರಲ್ಲಿ ಇವುಗಳನ್ನು ಎನ್ ಐ ಎ ನ ಅಡಿಯಲ್ಲಿ ತರುವುದು ರಾಜ್ಯಗಳ ಅಧಿಕಾರವನ್ನು ಮೊಟಕು ಮಾಡುವಂತೆ ಮಾಡಿದೆ. ಈ ಕಾನೂನನ್ನು ಒಕ್ಕೂಟ ವಿರೋಧಿ ಎಂದು ಪರಿಗಣಿಸಿ ಇದನ್ನು ರದ್ದುಗೊಳಿಸಬೇಕೆಂದು ಛತ್ತೀಸ್ ಗಢ ಸರ್ಕಾರವು ನ್ಯಾಯಾಲಯದ ಮೊರೆ ಹೊಕ್ಕಿತು. ಕೇಂದ್ರ ಸರ್ಕಾರವು ಈ ತಿದ್ದುಪಡಿ ಮಾಡಿದ ಕಾನೂನನ್ನು ದುರುಪಯೋಗಪಡಿಸಿಕೊಂಡು ಭೀಮಾ - ಕೋರೆಗಾವ್ ಪ್ರಕರಣವನ್ನು ಮಹಾರಾಷ್ಟ್ರ ರಾಜ್ಯ ಪೊಲೀಸ್ ನಿಂದ ಎನ್ ಐ ಎ ಗೆ ಏಕಪಕ್ಷೀಯವಾಗಿ ವರ್ಗಾವಣೆ ಮಾಡಿತು.

**ಜಾರಿ ನಿರ್ದೇಶನಾಲಯ, ಸಿ ಬಿ ಐ ಗಳ ದುರ್ಬಳಕೆ**
ಇಡಿ ಮತ್ತು ಸಿಬಿಐ ಗಳನ್ನು ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳನ್ನೇ ಗುರಿಯಾಗಿರಿಸಿಕೊಂಡು ಬಳಸಲಾಗುತ್ತಿದೆ ಮತ್ತು ವಿರೋಧ ಪಕ್ಷದ ಇಬ್ಬರು ಹಾಲಿ ಮುಖ್ಯಮಂತ್ರಿ ಗಳನ್ನು ಬಂಧಿಸಲಾಗಿದೆ.

**ರಾಜ್ಯಗಳ ತೆರಿಗೆ ಪಾಲಿಗೆ ಮಿತಿ ಹಾಕುವುದು**
ಡಿಸೆಂಬರ್ 2014 ರಲ್ಲಿ 14 ನೇ ಹಣಕಾಸು ಆಯೋಗ ತನ್ನ ವರದಿಯನ್ನು ರಾಷ್ಟಪತಿಗಳಿಗೆ ನೀಡಿತು. ಅದು ರಾಜ್ಯಗಳ ತೆರಿಗೆ ಪಾಲನ್ನು 32% ರಿಂದ 42% ಕ್ಕೆ ಅಂದರೆ 10% ರಷ್ಟು ಹೆಚ್ಚಿಸಲು ಶಿಫಾರಸು ಮಾಡಿತು. ಕೇಂದ್ರವು ಶಿಫಾರಸುಗಳನ್ನು ಮಾನ್ಯ ಮಾಡಲೇಬೇಕಾಗಿದೆಯಾದರೂ ಮೋದಿ ಸರ್ಕಾರವು ರಾಜ್ಯಗಳ ಪಾಲನ್ನು ಕಡಿತಗೊಳಿಸುವ ವ್ಯರ್ಥ ಪ್ರಯತ್ನ ಮಾಡಿತು.

# ವಾಸ್ತವ

**ರಾಜ್ಯಗಳ ಅಧಿಕಾರವನ್ನು ಸೀಮಿತಗೊಳಿಸುವ ತಂತ್ರಜ್ಞಾನ**

ಆಧಾರ್ ನಂಥ ತಂತ್ರಜ್ಞಾನಗಳು ಆಡಳಿತವನ್ನು ಕೇಂದ್ರೀಕರಣಗೊಳಿಸಿವೆ. ರಾಜ್ಯಗಳಿಗೆ ತಂತ್ರಜ್ಞಾನಗಳ ಮೇಲೆ ಯಾವ ಹಿಡಿತವೂ ಇಲ್ಲ. ಬೇರ್ಪಡೆಯಂಥ ವಿಷಯಗಳನ್ನು ಎದುರಿಸಲು ಅವುಗಳಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಅವರ ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಅವರಿಗೆ ಇತಿಮಿತಿಗಳಿವೆ.

ಪ್ರತಿಪಾದನೆ

# ಸಹಕಾರ ಒಕ್ಕೂಟ

**“ಸಹಕಾರ ಒಕ್ಕೂಟದ ತತ್ವದಿಂದ ರೂಪಿತವಾದ ದೇಶದ ಒಕ್ಕೂಟ ರಚನೆಯು ವಿಶ್ವಕ್ಕೇ ಮಾದರಿಯಾಗಿದೆ.”**

**ನರೇಂದ್ರ ಮೋದಿ,** 2022

ವಾಸ್ತವ

# ಪ್ರತಿಕೂಲ ಒಕ್ಕೂಟ

**ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ಕೈಗೊಂಡ ಅನೇಕ ಕ್ರಮಗಳಿಂದ ರಾಜ್ಯ ಸರ್ಕಾರಗಳು  ಕೇಂದ್ರದ ಜೊತೆ ಪ್ರತಿರೋಧವನ್ನು ಹೊಂದಿರುವಂತೆ ಆಗಿದೆ.**

**ರಾಜ್ಯ ವಿಷಯಗಳಲ್ಲಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿ ಹಸ್ತಕ್ಷೇಪ**

- **ಶಿಕ್ಷಣ :** ರಾಜ್ಯಗಳ ಸಹಮತವಿಲ್ಲದೆ ರಾಷ್ಟ್ರೀಯ ಶಿಕ್ಷಣ ನೀತಿ (NEP), NEET, CUET ಗಳನ್ನು ಹೇರಲಾಗಿದೆ.ಖಾಸಗಿ ತರಬೇತಿಯನ್ನು ಪಡೆಯಲಾಗದ ರಾಜ್ಯ ಮಂಡಳಿ ವಿದ್ಯಾರ್ಥಿಗಳಿಗೆ ಮತ್ತು ಬಡ ವಿದ್ಯಾರ್ಥಿಗಳಿಗೆ NEET, CUET  ಗಳು ಸವಾಲಾಗಿವೆ. ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆ ತರುವ ಭಾರತದ ಉನ್ನತ ಶಿಕ್ಷಣ ಆಯೋಗ (HECI), ರಾಷ್ಟ್ರೀಯ ಸಂಶೋಧನಾ ಸಂಸ್ಥೆ (NRF) ಗಳಂಥ ಹಲವಾರು ಕೇಂದ್ರೀಯ ಏಜನ್ಸಿ ಗಳನ್ನು NEP ಸೂಚಿಸುತ್ತದೆ. ಅಲ್ಲದೆ NEP ರಾಷ್ಟ್ರೀಯವಾಗಿ ಪಠ್ಯಕ್ರಮವನ್ನು ನಿರ್ಧರಿಸುವ ಅಧಿಕಾರವನ್ನು ಕೇಂದ್ರಕ್ಕೆ ನೀಡುತ್ತದೆ.
- **ಕೃಷಿ :** ಕೃಷಿಯು ರಾಜ್ಯದ ವಿಷಯವಾದರೂ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ಸಮಾಲೋಚಿಸದೆ 3 ಕೃಷಿ ಮಸೂದೆಗಳನ್ನು 2020 ಜಾರಿಗೆ ತಂದು ಭಾರಿ ಪರಿಣಾಮಗಳನ್ನು ಉಂಟುಮಾಡಿತು.
- **ಸಹಕಾರ ಸಂಘಗಳು :** ಸಹಕಾರ ಕ್ಷೇತ್ರವು ರಾಜ್ಯ ವಿಷಯವಾದರೂ, 2021 ರಲ್ಲಿ ಕೇಂದ್ರ
- ಸರ್ಕಾರವು ಸಹಕಾರ ಖಾತೆಯನ್ನು ಪ್ರಾರಂಭಿಸಿತು.

**370 ನೇ ವಿಧಿಯ ರದ್ದತಿ:**

2019 ರಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯವು ರಾಷ್ಟ್ರಪತಿ ಆಳ್ವಿಕೆಯಲ್ಲಿದ್ದಾಗ, ಚುನಾಯಿತ ಪ್ರತಿನಿಧಿಗಳ ಒಪ್ಪಿಗೆ ಪಡೆಯದೇ ರಾಜ್ಯದ ವಿಶೇಷ
ಸ್ಥಾನಮಾನವನ್ನು ರದ್ದುಗೊಳಿಸಲಾಯಿತು.

**ರಾಜ್ಯಪಾಲರ ಪಾತ್ರ**

ರಾಜ್ಯ ಸರ್ಕಾರಗಳ ಸಲಹೆಯ ಮೇರೆ ರಾಜ್ಯಪಾಲರು ಕಾರ್ಯ ನಿರ್ವಹಿಸುತ್ತಾರೆ ಎಂಬ ನಿರೀಕ್ಷೆಯ ಹೊರತಾಗಿ ಕೇಂದ್ರ ಸರ್ಕಾರದಿಂದ ನೇಮಕಗೊಂಡ ರಾಜ್ಯಪಾಲರು ಬಹಿರಂಗವಾಗಿ ಏಕ ಪಕ್ಷೀಯವಾಗಿ ಪಾತ್ರ ನಿರ್ವಹಿಸುತ್ತಿರುವುದನ್ನು ವಿರೋಧ ಪಕ್ಷದ ಆಡಳಿತವಿರುವ ರಾಜ್ಯಗಳಲ್ಲಿ ಕಾಣಬಹುದಾಗಿದೆ.

- ತಮಿಳುನಾಡು ರಾಜ್ಯಪಾಲರಾದ ಆರ್ ಎನ್ ರವಿ ರಾಜ್ಯ ಸರ್ಕಾರದೊಂದಿಗೆ ಘರ್ಷಣೆಯಲ್ಲೇ ಇದ್ದಾರೆ. ಮಸೂದೆಗಳನ್ನು ವಿಳಂಬ ಮಾಡುವುದು ( ಒಂದು ಘಟ್ಟದಲ್ಲಿ 21 ಮಸೂದೆಗಳು ಅವರಲ್ಲಿ ಬಾಕಿ ಇದ್ದವು ), ತಮಿಳುನಾಡು ವಿದ್ಯಾರ್ಥಿಗಳಿಗೆ NEET ಇಂದ ವಿನಾಯ್ತಿ ನೀಡುವ ಮಸೂದೆಯಂಥವುಗಳನ್ನು ಹಿಂತಿರುಗಿಸುವುದು.. ಹೀಗೆ.
- 2021 ರಲ್ಲಿ ಮಹಾರಾಷ್ಟ್ರ ರಾಜ್ಯಪಾಲರಾದ ಬಿ ಎಸ್ ಕೊಷ್ಯಾರಿ ರಾಜ್ಯ ವಿಧಾನ ಪರಿಷತ್ ಗೆ 12 ನಾಮನಿರ್ದೇಶನಗಲನ್ನು ತಡೆ ಹಿಡಿದರು ಎಂಬ ಆಪಾದನೆಗೆ ಗುರಿಯಾಗಿದ್ದರು.
- ಕೇರಳ ರಾಜ್ಯಪಾಲರಾದ ಆರಿಫ್ ಮೊಹಮದ್ ಖಾನ್ ಅವರು ರಾಜ್ಯ ಮುಖ್ಯ ಮಂತ್ರಿ ಪಿ ವಿಜಯನ್ ಅವರೊಂದಿಗೆ ಹಲವಾರು ವಿಷಯಗಳಲ್ಲಿ ಘರ್ಷಣೆಯಲ್ಲೇ ಇದ್ದಾರೆ. ಉದಾಹರಣೆಗೆ ಕೇರಳ ವಿಶ್ವವಿದ್ಯಾನಿಲಯದ 15 ಸೆನೆಟ್ ಸದಸ್ಯರನ್ನು ಏಕಪಕ್ಷೀಯವಾಗಿ ತೆಗೆದು ಹಾಕಿದ್ದು ಮತ್ತು ರಾಜ್ಯದ 9 ವಿಶ್ವವಿದ್ಯಾನಿಲಯಗಳ ಉಪ ಕುಲಪತಿಗಳ ರಾಜೀನಾಮೆಯನ್ನು ಕೇಳಿದ್ದು.

ವಾಸ್ತವ

# ಪ್ರತಿಕೂಲ ಒಕ್ಕೂಟ

**ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ಕೈಗೊಂಡ ಅನೇಕ ಕ್ರಮಗಳಿಂದ ರಾಜ್ಯ ಸರ್ಕಾರಗಳು  ಕೇಂದ್ರದ ಜೊತೆ ಪ್ರತಿರೋಧವನ್ನು ಹೊಂದಿರುವಂತೆ ಆಗಿದೆ.**

ಪಶ್ಚಿಮ ಬಂಗಾಳದ ರಾಜ್ಯಪಾಲ ಜಗದೀಪ್ ಧನಕರ್ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೊಂದಿಗೆ ಕಲಹ ಮಾಡುತ್ತಲೇ ಕೋವಿಡ್ -19 ನ್ನು ನಿರ್ವಹಿಸಿದ ಬಗ್ಗೆ, ರಾಜಕೀಯ ಹಿಂಸಾಚಾರ, ಕಾನೂನು ವ್ಯವಸ್ಥೆ ಗಳ ಬಗ್ಗೆ ತಗಾದೆ ತೆಗೆಯುತ್ತ ಹಿರಿಯ ಪೊಲೀಸ್ ಮತ್ತು ಇತರ ಅಧಿಕಾರಿಗಳಿಗೆ ಸೂಚನೆ ನೀಡುವ ಹಂತಕ್ಕೆ ಹೋಗಿದ್ದಾರೆ.

ಹಲವಾರು ಬಿಜೆಪಿಯೇತರ ರಾಜ್ಯಗಳು, ರಾಜ್ಯಪಾಲರುಗಳು ಮುಖ್ಯವಾದ ವಿಧೇಯಕಗಳನ್ನು ಕಾಯ್ದೆ ಆಗದಂತೆ ವಿನಾ ಕಾರಣ ತಡೆ ಹಿಡಿದಿರುವುದನ್ನು ಪ್ರತಿಭಟಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ನಾಗರತ್ನ ಅವರು **“ ಈ ರೀತಿಯ ದಾವೆಗಳು ಕಡಿಮೆಯಾಗಲು ರಾಜ್ಯಪಾಲರುಗಳು ಸಂವಿಧಾನದ ರೀತಿ ನಡೆದುಕೊಳ್ಳಬೇಕೆಂದೂ, ರಾಜ್ಯಪಾಲರು ಹೇಗೆ ನಡೆದುಕೊಳ್ಳಬೇಕೆಂದು ಹೇಳುವುದು ಮುಜುಗರದ ವಿಷಯವೆಂದೂ, ಆದರೆ ಈಗ ಅವರು ಸಂವಿಧಾನದ ಪ್ರಕಾರ ನಡೆದುಕೊಳ್ಳಬೇಕೆಂದು ಹೇಳುವ ಸಮಯ ಬಂದಿದೆ”** ಎಂದು ಹೇಳಿದ್ದಾರೆ.

**ದೆಹಲಿ ಸೇವಾ ವಿಧೇಯಕ**

2023 ರಲ್ಲಿ ಕೇಂದ್ರ ಸರ್ಕಾರವು ದೆಹಲಿ ಸೇವಾ ವಿಧೇಯಕವನ್ನು ಜಾರಿಗೆ ತಂದಿತು. ಇದು ಚುನಾಯಿತ ದೆಹಲಿ ಸರ್ಕಾರವು ಹುದ್ದೆಗಳ ವರ್ಗಾವಣೆ, ಜಾಗೃತ ಆಯೋಗ ಮುಂತಾದ ವಿಷಯಗಳ ಬಗ್ಗೆ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅವರಿಗೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಕಸಿದುಕೊಂಡು ಕೇಂದ್ರ ನೇಮಕಮಾಡುವ ಅಧಿಕಾರಿಗಳಿಗೆ ಮತ್ತು ಲೆಫ್ಟಿನೆಂಟ್ ಗವರ್ನರ್ ಅವರಿಗೆ ಅಧಿಕಾರ ನೀಡಿ ಚುನಾಯಿತ ಮುಖ್ಯಮಂತ್ರಿ ಮತ್ತು ಹಿರಿಯ ಅಧಿಕಾರಿಗಳ ಅಭಿಪ್ರಾಯವನ್ನು ತಳ್ಳಿ ಹಾಕಲು ಅವಕಾಶ ಕಲ್ಪಿಸಿದೆ.

**ವಿತ್ತೀಯ ದಬ್ಬಾಳಿಕೆ : ರಾಜ್ಯಗಳಿಗೆ ಕಡಿಮೆಯಾಗುತ್ತಿರುವ ತೆರಿಗೆ ವರ್ಗಾವಣೆ ಮತ್ತು ಧನ ಹಂಚಿಕೆ**

1) ಕೇಂದ್ರದ ತೆರಿಗೆಗಳು ಅಥವಾ ವಿಭಜಿತ ಮೊತ್ತದಲ್ಲಿ ರಾಜ್ಯಗಳಿಗೆ ಬರುತ್ತಿದ್ದ ಪಾಲು ಕಡಿಮೆ ಆಗುತ್ತಿದೆ. ಜಿಎಸ್ ಟಿಯನ್ನು 2017 ರಲ್ಲಿ ಪ್ರಾರಂಭಿಸಲಾಯಿತು. ಅಂದಿನಿಂದ ಕೇಂದ್ರ ತೆರಿಗೆ ವರ್ಗಾವಣೆ ಬಗ್ಗೆ ಕೇಂದ್ರ - ರಾಜ್ಯಗಳ ನಡುವೆ ತಿಕ್ಕಾಟ ನಡೆಯುತ್ತಲೇ ಇದೆ.

- ಅ. ಕೇಂದ್ರ ಸರ್ಕಾರವು ಈಗ ಸೆಸ್ ಮತ್ತು ಸರ್ ಚಾರ್ಜ್ ರೂಪದಲ್ಲಿ ಹೆಚ್ಚಿನ ತೆರಿಗೆ ಆದಾಯವನ್ನು ಸಂಗ್ರಹಿಸುತ್ತಿದೆ. ಇದನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಬೇಕಿಲ್ಲ ( 2010 ರಲ್ಲಿ 8.6% ರಿಂದ 2021ರಲ್ಲಿ 28% ).
- ಬ. ರಾಜ್ಯಗಳಿಗೆ ಸಲ್ಲುವ ಜಿಎಸ್ ಟಿ ಪರಿಹಾರವನ್ನು ನೀಡಲಾಗುತ್ತಿಲ್ಲ.

2) ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳು ಬರ ಅಥವಾ ಪ್ರವಾಹ ಪರಿಹಾರಕ್ಕಾಗಿ ವಿಶೇಷ ಅನುದಾನವನ್ನು ಕೋರಿದಾಗ ಕೇಂದ್ರ ಸರ್ಕಾರವು ಅದಕ್ಕೆ ಸ್ಪಂದಿಸುತ್ತಿಲ್ಲ. ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಬರ ಪರಿಹಾರಕ್ಕಾಗಿ ಕೋರ್ಟ್ ನ ಮೊರೆ ಹೋಗಬೇಕಾಗಿದೆ.

3) ಷರತ್ತುಗಳನ್ನು ವಿಧಿಸಿದ ಕೇಂದ್ರ ಸರ್ಕಾರ : ಉದಾಹರಣೆಗೆ, ಪ್ರಧಾನ ಮಂತ್ರಿ ಉಚ್ಚತರ ಶಿಕ್ಷಾ ಅಭಿಯಾನ ( PM-USHA) ದ ಉನ್ನತ ಶಿಕ್ಷಣ ಯೋಜನೆಯನ್ನು ಪಡೆಯಲು ರಾಜ್ಯಗಳು ತಿಳಿವಳಿಕೆ ಜ್ಞಾಪಕ ಪತ್ರ ( MoU ) ವನ್ನು ಸಹಿ ಮಾಡಿ NEP ಯನ್ನು ಅಂಗೀಕರಿಸಿದ್ದೇವೆ ಎಂದು ಬದ್ಧತೆ ತೋರಬೇಕು. ರಾಜ್ಯಗಳು ಬಲವಂತವಾಗಿ ಕೇಂದ್ರದ ಷರತ್ತುಗಳಿಗೆ ಒಪ್ಪುವಂತೆ ಮಾಡಿ ರಾಜ್ಯಗಳ ಸಾಲ ಎತ್ತುವ ಪ್ರಕ್ರಿಯೆಗೆ ಅಡ್ಡಿ ಮಾಡುತ್ತಿದೆ. ಇದು ಕೋವಿಡ್ ಸಮಯದಲ್ಲೂ ಇತ್ತು. ಕೇರಳ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲನ್ನು ಇದೇ ಕಾರಣಕ್ಕೆ ಹತ್ತಬೇಕಾಯಿತು.

## ವಾಸ್ತವ

# ಪ್ರತಿಕೂಲ ಒಕ್ಕೂಟ

**ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ಕೈಗೊಂಡ ಅನೇಕ ಕ್ರಮಗಳಿಂದ ರಾಜ್ಯ ಸರ್ಕಾರಗಳು  ಕೇಂದ್ರದ ಜೊತೆ ಪ್ರತಿರೋಧವನ್ನು ಹೊಂದಿರುವಂತೆ ಆಗಿದೆ.**

**ಕರ್ನಾಟಕ**

ತಲಾವಾರು ಆದಾಯದ ಅಗ್ರ ರಾಜ್ಯಗಳಲ್ಲಿ ಒಂದಾದ ಕರ್ನಾಟಕವು ತೆರಿಗೆ ಪಾವತಿಸುವುದರಲ್ಲಿ ಮೂರನೇ ರಾಜ್ಯವಾಗಿದ್ದು ಕಡಿಮೆ ಅಭಿವೃದ್ಧಿ ಹೊಂದಿರುವ ರಾಜ್ಯಗಳಿಗೆ ಕ್ರಾಸ್ ಸಬ್ಸಿಡಿ ಮೂಲಕ ಸಹಾಯ ಮಾಡುತ್ತಿದೆ. ಆದರೆ ಜಿಎಸ್ ಟಿ ಆರಂಭವಾದ ಮೇಲೆ ತನ್ನ ತೆರಿಗೆ ಆದಾಯದಲ್ಲಿ ಕೊರತೆ ಅನುಭವಿಸುತ್ತಿದೆ.

ರಾಜ್ಯದ 223 ತಾಲ್ಲೂಕುಗಳು ಬರದ ಸಂಕಷ್ಟ ಎದುರಿಸುತ್ತಿದ್ದರೂ ಕೇಂದ್ರ ಸರ್ಕಾರವು ರಾಷ್ಟ್ರೀಯವಿಪತ್ತು ಪರಿಹಾರ ನಿಧಿಯಿಂದ ಕರ್ನಾಟಕವು ಕೋರಿದ್ದ ₹17,900 ಕೋಟಿಯಲ್ಲಿ ಒಂದು ಪೈಸೆಯನ್ನೂ ಬಿಡುಗಡೆ ಮಾಡಿಲ್ಲ.

2023 ರಲ್ಲಿ ಕೇಂದ್ರದ ಸಂಚಿತ ನಿಧಿಯಿಂದ ರಾಜ್ಯಗಳಿಗೆ ಅಕ್ಕಿ ಮತ್ತು ಗೋಧಿಯ ನೇರ ಮಾರಾಟವನ್ನು ಹಟಾತ್ತಾಗಿ ನಿಲ್ಲಿಸಲಾಯಿತು. ಇದರಿಂದಾಗಿ ರಾಜ್ಯದ ಪ್ರಮುಖ ಕಾರ್ಯಕ್ರಮವಾದ ಅನ್ನ ಭಾಗ್ಯ ಯೋಜನೆಯ ಅನುಷ್ಠಾನಕ್ಕೆ ತೊಂದರೆಯಾಯಿತು.

15 ನೇ ಹಣಕಾಸು ಆಯೋಗ ಶಿಫಾರಸ್ಸು ಮಾಡಿದ್ದ ವಿಶೇಷ ಅನುದಾನವನ್ನು ಪಾವತಿ ಮಾಡಿಲ್ಲ.ಭದ್ರ ಮೇಲ್ದಂಡೆ ನೀರಾವರಿ ಯೋಜನೆಗಳಂಥ ಯೋಜನೆಗಳಿಗೆ ಧನ ದೊರೆತಿಲ್ಲ. ಆರ್ಥಿಕವಾಗಿ ಪ್ರಬಲ ಶಕ್ತಿಯಾಗಲು ಉದ್ಯೋಗ ಮತ್ತು ಸಂಪತ್ತನ್ನು ಉತ್ಪಾದಿಸಿ ಜನಸಂಖ್ಯೆ ಯನ್ನೂ ನಿಯಂತ್ರಿಸುತ್ತಿರುವ ರಾಜ್ಯಕ್ಕೆ ಈ ರೀತಿ ದಂಡ ವಿಧಿಸಲಾಗುತ್ತಿದೆ.

ಪ್ರತಿಪಾದನೆ

# ಪ್ರತಿಕೂಲ ಒಕ್ಕೂಟ

**ಸಹಕಾರ ಮತ್ತು ಪೈಪೋಟಿಯನ್ನು ಹತೋಟಿಯಲ್ಲಿರಿಸಿ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವ ಅಗತ್ಯವನ್ನು ಪ್ರಧಾನಿ ಮೋದಿ ಒತ್ತಿ ಹೇಳಿದ್ದಾರೆ. ಬಹಳ ಕಾಲದಿಂದ ಕೇಂದ್ರ ಮತ್ತು ರಾಜ್ಯಗಳ ನಡುವೆ ' ದೊಡ್ಡಣ್ಣನ ಸಂಬಂಧ ' ಇರುವುದು ನಾವು ನೋಡಿದ್ದೇವೆ. ತಲೆಗೆಲ್ಲ ಒಂದೇ ಮಂತ್ರ ಎಂಬ ನೀತಿಯನ್ನು ಬಹಳ ವರ್ಷಗಳಿಂದ ಪಾಲಿಸಿಕೊಂಡು ಬಂದು ಸ್ಥಳೀಯ ಅಗತ್ಯಗಳು ಮತ್ತು ರಾಜ್ಯಗಳ ವೈವಿಧ್ಯ ವನ್ನು ಗಣನೆಗೆ ತೆಗೆದುಕೊಂಡಿಲ್ಲ.**

**narendramodi.in**

## ವಾಸ್ತವ

**ಸಮಾಲೋಚನಾ ರೀತಿಯ ಪ್ರಾಮುಖ್ಯವನ್ನು ಪ್ರಧಾನಿಗಳು ಅರ್ಥ ಮಾಡಿಕೊಂಡಿದ್ದಾರೆ ಎಂದು ಅನ್ನಿಸುವುದಾದರೂ ಸರ್ಕಾರದ ಕ್ರಮಗಳು ಇದಕ್ಕೆ ವ್ಯತಿರಿಕ್ತವಾಗಿಯೇ ಇವೆ. ಸರ್ಕಾರವು ಕೇಂದ್ರೀಕರಣವೇ ಪ್ರಗತಿಗೆ ದಾರಿ ಎಂಬುದನ್ನು ದೃಢವಾಗಿ ಮುನ್ನೆಲೆಗೆ ತರುತ್ತಿದೆ." ಒಂದು ರಾಷ್ಟ್ರ" ಎಂಬ ರಾಜಕೀಯ ಯೋಜನೆಯು ರಾಜ್ಯಗಳ ಆಕಾಂಕ್ಷೆಗಳೊಂದಿಗೆ ನೇರ ಸಂಘರ್ಷದಲ್ಲಿದೆ. ಒಕ್ಕೂಟ ವ್ಯವಸ್ಥೆಯು ಅಭಿವೃದ್ಧಿಗೆ ಅಡ್ಡಗಲ್ಲು ಎಂದು**

### ಒಂದು ದೇಶ, ಒಂದು ಪಡಿತರ ಕಾರ್ಡು

ವಲಸೆ ಹೋಗುವ ಕಾರ್ಮಿಕರಿಗೆ ದೇಶದ ಯಾವುದೇ ಭಾಗದಲ್ಲಾದರೂ ಪಡಿತರ ಪಡೆಯುವ ಅವಕಾಶ ಕಲ್ಪಿಸಲು ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಯನ್ನು ರಾಜ್ಯಗಳು ಹೆಚ್ಚಿನ ಸಾಲ ಮಿತಿಯನ್ನು ಹೊಂದಲು ಪೂರ್ವ ಷರತ್ತಿನಂತೆ ವಿಧಿಸಲಾಯಿತು. ಆದರೆ 2021 ರಲ್ಲಿ ಇದು ಕೇವಲ 37,000 ವ್ಯವಹಾರಗಳನ್ನು ದೇಶಾದ್ಯಂತ ಕಂಡಿತು. ಆದರೆ ರಾಜ್ಯಗಳ ಸಾಲ ಪಡೆಯುವ ಸಾಮರ್ಥ್ಯಕ್ಕೆ ಬಲವಾದ ಪೆಟ್ಟು ಬಿದ್ದಿತು.

1. ಕೇಂದ್ರ ಸರ್ಕಾರವು ರಾಜ್ಯಗಳು ರಾಷ್ಟ್ರೀಯ ಮಾಹಿತಿ ಶಾಸ್ತ್ರ ಕೇಂದ್ರ ( ಎನ್ ಐ ಸಿ ) ವು ನಿಭಾಯಿಸುವ ಏಕಮಾತ್ರ ದೃಡೀಕರಣ ಆಧಾರವನ್ನು ಬಳಸಬೇಕೆಂದು ಒತ್ತಾಯ ಮಾಡಿತು. ರಾಜ್ಯಗಳು ತಮ್ಮದೇ ಸ್ವತಂತ್ರ ದೃಡೀಕರಣ ಆಧಾರವನ್ನು ಬಳಸುವಂತಿರಲಿಲ್ಲ.
2. ವಲಸೆ ಕಾರ್ಮಿಕರ ಬಳಕೆಯ ಅಂಕಿ ಅಂಶಗಳ ಕೇಂದ್ರೀಕರಣವು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ನಿರ್ಧಾರ ಕೈಗೊಳ್ಳುವ ವಿಷಯದಲ್ಲಿ ಕೇಂದ್ರದ ಪಾತ್ರವನ್ನು ಹೆಚ್ಚಿಸುತ್ತದೆ ಮತ್ತು ರಾಜ್ಯ ಸರ್ಕಾರಗಳ ಪಾತ್ರವನ್ನು ಕಡಿಮೆ ಮಾಡುತ್ತದೆ.ಡಿಎಂಕೆ, ಎಐಎಡಿಎಂಕೆ ಗಳಂಥ ಪ್ರಾದೇಶಿಕ ಪಕ್ಷಗಳು ಈ ಯೋಜನೆಯನ್ನು ವಿರೋಧಿಸಿದ್ದವು.

### ಒಂದು ದೇಶ, ಒಂದು ನೋಂದಣಿ

2022 ರ ಕೇಂದ್ರ ಬಜೆಟ್ ನಲ್ಲಿ ' ಒಂದು ದೇಶ ಒಂದು ನೋಂದಣಿ ' ಯೋಜನೆಯ ಆಯ್ಕೆಯ ಪ್ರಸ್ತಾವವಿದೆ. ವಾಸ್ತವ್ಯ ಮತ್ತು ವ್ಯವಹಾರದ ಅನುಕೂಲತೆಯ ಹಿನ್ನೆಲೆಯಲ್ಲಿ ' ಯಾವುದೇ ಭಾಗದಲ್ಲಾದರೂ ನೋಂದಣಿ' ಮೂಲಕ ದಾಖಲಾತಿಗಳ ನೋಂದಣಿಗೆ. ಒಂದೇ ರೀತಿಯ ಜಮೀನು ನೋಂದಣಿಗೆ ಪ್ರಕ್ರಿಯೆ ಇದಾಗಿದೆ. ಆದರೆ ಇದು ರಾಜ್ಯಗಳ ಅಧಿಕಾರವನ್ನು ಮೊಟಕು
ಮಾಡಿ ಅವುಗಳ ಆದಾಯಕ್ಕೂ ತೊಂದರೆ ಮಾಡಲಿದೆ.

### ಒಂದು ದೇಶ, ಒಂದು ಚುನಾವಣೆ

ಈ ವಿಷಯದ ಬಗ್ಗೆ ರಾಜ್ಯಗಳ ಜತೆ ಯಾವುದೇ ಸಮಾಲೋಚನೆ ಅಥವಾ ಒಮ್ಮತ ಇಲ್ಲದೇ ಇದ್ದರೂ ಪ್ರಧಾನಿ ಮೋದಿ ಅವರು ಆಡಳಿತ ಮತ್ತು ದಕ್ಷತೆಯ ಸುಧಾರಣೆಯ ನೆಪದಲ್ಲಿ ಲೋಕಸಭೆ ಮತ್ತು ರಾಜ್ಯ ಅಸೆಂಬ್ಲಿ ಚುನಾವಣೆಗಳನ್ನು ಏಕ ಕಾಲದಲ್ಲಿ ನಡೆಸುವುದರ ಬಗ್ಗೆ ಬಲವಾಗಿ ಪ್ರತಿಪಾದಿಸಿದ್ದಾರೆ. ಏಕ ಕಾಲದ ಚುನಾವಣೆಯಲ್ಲಿ ಪ್ರಾದೇಶಿಕ ವಿಷಯಗಳು ರಾಷ್ಟ್ರೀಯ ವಿಷಯಗಳೊಂದಿಗೆ ಜನರ ಗಮನ ಸೆಳೆಯಲು ಸ್ಪರ್ಧೆಗೆ ನಿಲ್ಲಬೇಕಾಗುತ್ತದೆ. ಇದು ರಾಜ್ಯ ಮಟ್ಟದ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುತ್ತದೆ. ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ನಿರ್ಧಾರ ಕೈಗೊಳ್ಳುವ ಜನರ ಸ್ವತಂತ್ರ ಆಯ್ಕೆಗಳಿಗೆ ಧಕ್ಕೆ ಆಗುತ್ತದೆ. ರಾಜ್ಯ ಮಟ್ಟದ ಸ್ವಾಯತ್ತತೆಗೆ ಅಡ್ಡಿಯಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಾಜಿಯಾಗುವಂತೆ ಮಾಡುವ ಸಂಭವ ಉಂಟಾಗುತ್ತದೆ. ಅದೂ ಅಲ್ಲದೆ ಒಬ್ಬ ಮುಖ್ಯಮಂತ್ರಿ ವಿಧಾನ ಸಭೆಯನ್ನು ವಿಸರ್ಜಿಸುವ ನಿರ್ಧಾರ ಮಾಡಿದರೆ ಅಥವಾ ರಾಜ್ಯ ಸರ್ಕಾರ ವಿಶ್ವಾಸ ಕಳೆದುಕೊಂಡರೆ, ಆ ಅವಧಿ ಮುಗಿಯುವವರೆಗೂ ನಾಯಿತ ಸರ್ಕಾರವೇ ಇರುವುದಿಲ್ಲ. ಇಷ್ಟೇ ಅಲ್ಲದೆ, ಈ ಕ್ರಮವು ಸಂಕೀರ್ಣವೂ ತುಂಬಾ ದೀರ್ಘವಾದದ್ದೂ ಆಗಿದೆ - ಯಾಕೆಂದರೆ ಕಾರ್ಯದ ಅನುಷ್ಠಾನ ಮತ್ತು ಹಣಕಾಸಿನ ಸವಾಲುಗಳನ್ನು ಎದುರಿಸುವುದಲ್ಲದೆ ಸಂವಿಧಾನದ ತಿದ್ದುಪಡಿ ಮತ್ತು ರಾಜಕೀಯ ಸಹಮತವೂ ಬೇಕಾಗಿದೆ.

**ಪ್ರತಿಪಾದನೆ**

# ಪ್ರತಿಕೂಲ ಒಕ್ಕೂಟ

**“ಎಲ್ಲರನ್ನೂ ಕರೆದೊಯ್ಯಲು ನಾನು ಶ್ರಮ ವಹಿಸುತ್ತೇನೆ ಮತ್ತು ಅದೊಂದೇ ದೇಶದ ಅಭಿವೃದ್ಧಿಯ ಮಾರ್ಗ ಎಂದು ಭಾವಿಸುತ್ತೇನೆ. ನಾವು ವೈವಿಧ್ಯದಲ್ಲಿ ಏಕತೆ ಎಂಬುದರಲ್ಲಿ ವಿಶ್ವಾಸ ಇರಿಸಿದ್ದೇವೆ.”**

**- ನರೇಂದ್ರ ಮೋದಿ** 2024

## ವಾಸ್ತವ

ಪ್ರಧಾನಿಯ ಮತ್ತು ಅವರ ಪಕ್ಷದ ಕಾರ್ಯವೈಖರಿ ಏಕರೂಪದ ‘ ಒಂದು ದೇಶ’ ದ ಬಗ್ಗೆ ಅವರಿಗಿರುವ ಬಲವಾದ ನಂಬಿಕೆಯನ್ನು ಎತ್ತಿತೋರಿಸುತ್ತದೆ. ಇದಕ್ಕಾಗಿ ಭಾರತೀಯರು ಒಂದೇ ಪ್ರಧಾನ ಧರ್ಮ, ಸಂಸ್ಕೃತಿ, ಭಾಷೆ ಮುಂತಾದವುಗಳನ್ನು ಹೊಂದಿ ಭಾರತೀಯ ರಾಷ್ಟ್ರೀಯತೆಯನ್ನು ಬೆಳೆಸಬೇಕು ಎಂದಿದೆ. ಈ ‘ ಒಂದು ದೇಶ ‘ ಎಂಬ ರಾಜಕೀಯ ಯೋಜನೆಯು ಧರ್ಮ ನಿರಪೇಕ್ಷತೆಯ ಮೂಲ ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾಗಿದೆ ಮತ್ತು ಭಾರತದ ವೈವಿಧ್ಯ ಜನ ಸಮುದಾಯದ ಆಶೋತ್ತರಗಳಿಗೆ ವ್ಯತಿರಿಕ್ತವಾಗಿದೆ.ಇದನ್ನು ಒಪ್ಪದೇ ಇರುವ ಭಾರತೀಯರನ್ನು ‘ ದೇಶ ದ್ರೋಹಿಗಳು ‘ ಎಂದು ಬಿಂಬಿಸಲಾಗುತ್ತಿದೆ.

ಪ್ರತಿಪಾದನೆ

# ಪ್ರತಿಕೂಲ ಒಕ್ಕೂಟ

**“ಹಿಂದಿ, ಹಿಂದೂ, ಹಿಂದೂಸ್ತಾನ್”**
**- ವಿ. ಡಿ. ಸಾವರ್ಕರ್**

**“ ಹಿಂದಿ ಭಾಷೆಯೊಂದೇ ದೇಶವನ್ನು ಒಂದುಗೂಡಿಸಬಹುದು”**
**- ಅಮಿತ್ ಶಾ, 2019**

**“..... ಸಿಎಎ ವಿರುದ್ಧ ಪ್ರತಿಭಟಿಸುವವರನ್ನು ಅವರು ಧರಿಸಿರುವ ಬಟ್ಟೆಯಿಂದಲೇ ಗುರುತಿಸಬಹುದು.....”**
**- ನರೇಂದ್ರ ಮೋದಿ, 2019**

# ವಾಸ್ತವ

## ಒಂದೇ ಧರ್ಮ / ಸಂಸ್ಕೃತಿ

ಆರ್ ಎಸ್ ಎಸ್ ಮತ್ತು ಅದರ ರಾಜಕೀಯ ಅಂಗವಾದ ಬಿಜೆಪಿ ಗಳು ಹಿಂದೂ ರಾಷ್ಟ್ರ ಎಂಬ ಪರಿಕಲ್ಪನೆಯನ್ನು ಮುನ್ನೆಲೆಗೆ ತರುತ್ತಿವೆ. ಅಂಥ ಸನ್ನಿವೇಶದಲ್ಲಿ ಉಳಿದ ಎಲ್ಲ ಮತದವರನ್ನೂ ದ್ವಿತೀಯ ದರ್ಜೆ ಪ್ರಜೆಗಳು ಎಂದು ಭಾವಿಸಲಾಗುತ್ತದೆ. ಭಾರತವು ಅನೇಕ ನಂಬಿಕೆಗಳ, ಶ್ರದ್ದೆಗಳ, ಸಂಸ್ಕೃತಿ ಮತ್ತು ಸಂಪ್ರದಾಯಗಳ ನಾಡು. ಹಿಂದೂ ರಾಷ್ಟ್ರ ಎನ್ನುವುದು ರಾಜಕೀಯವಾಗಿ ಅನುಕೂಲಕರ ಕಲ್ಪನೆ. ಆದರೆ ಹೆಚ್ಚಿನ ಭಾರತೀಯರು ವೈವಿಧ್ಯ ಚರಿತ್ರೆ, ಅನುಭವಗಳು ಮತ್ತು ಆಶೋತ್ತರಗಳನ್ನು ಹೊಂದಿದ್ದಾರೆ. ಇದು “ ಹಿಂದೂ ಬಹುಸಂಖ್ಯಾತ” ತತ್ವಕ್ಕೆ ಹೊಂದುವುದಿಲ್ಲ.

ಒಂದು ಪ್ರಾಂತ್ಯದ ಹಿಂದೂಗಳು ಅದೇ ಭಾಗದ ಬೇರೆ ಧರ್ಮದ ಜನರೊಂದಿಗೆ ಹೆಚ್ಚಿನ ಸಮಾನ ಅಂಶಗಳನ್ನು ಹೊಂದಿದ್ದಾರೆ ಮತ್ತು ಇವು ಭಾರತದ ಇನ್ನಾವುದೋ ಭಾಗದ ಹಿಂದೂಗಳ ಅಭ್ಯಾಸಗಳಿಗಿಂತ ಭಿನ್ನವಾಗಿವೆ. ಹಿಂದೂ ಸಮಾಜದ ಬಗ್ಗೆ ಒಬ್ಬ ದಲಿತನ ಅನುಭವ ಮತ್ತು ಷ್ಟಿಕೋನ ಸವರ್ಣ ಹಿಂದೂವಿನ ಅನುಭಕ್ಕಿಂತ ಸಾಕಷ್ಟು ವಿಭಿನ್ನವಾಗಿರುತ್ತದೆ.

ಮುಸ್ಲಿಮರು ಭಾರತದ ಅತಿ ಹೆಚ್ಚಿನ ಸಂಖ್ಯೆಯ ಅಲ್ಪ ಸಂಖ್ಯಾತರು. ಅವರು ದ್ವೇಷ ಭಾಷಣ, ಹಿಂಸೆ, ಹೊಡೆತ ಮತ್ತು ಸಾವಿಗೀಡಾಗುವುದು ಮೊದಲಾದ ದಾಳಿಗಳಿಗೆ ತುತ್ತಾಗುತ್ತಿದ್ದಾರೆ. ಸಿಎಎ ಮತ್ತು ಎನ್ ಆರ್ ಸಿ ಗಳನ್ನು ಜಾರಿಗೆ ತರಲು ನಡೆಯುತ್ತಿರುವ ತೀವ್ರ ಪ್ರಯತ್ನಗಳು ಈ ತಾರತಮ್ಯವನ್ನು ಕಾನೂನಾತ್ಮಕವನ್ನಾಗಿಸುತ್ತಿವೆ. ಕ್ರಿಶ್ಚಿಯನ್ ವಿರೋಧಿ ಹಿಂಸಾಚಾರವೂ ದೇಶಾದ್ಯಂತ ಹೆಚ್ಚುತ್ತಿವೆ.

## ಒಂದು ಭಾಷೆ

ಪ್ರಧಾನಿ ಮೋದಿಯವರು ಹಿಂದಿಯನ್ನು ದೇಶದ ‘ ರಾಷ್ಟ್ರೀಯ ಭಾಷೆ ‘ ಎಂದು ಬಿಂಬಿಸುತ್ತಿದ್ದಾರೆ. 2019 ರಲ್ಲಿ ಗೃಹ ಮಂತ್ರಿ ಅಮಿತ್ ಶಾ ಅವರು “ ಇಂದು ಯಾವುದಾದರೂ ಒಂದು ಭಾಷೆ ದೇಶದ ಏಕತೆಯನ್ನು ಹೆಣೆಯಲು ಆಗುವುದಾದರೆ ಅದು ಹಿಂದಿ” ಎಂದು ಹೇಳಿದರಲ್ಲದೆ “ ಇದು ಅತಿ ಹೆಚ್ಚು ಬಳಕೆಯಲ್ಲಿರುವ ಮತ್ತು ಹೆಚ್ಚು ಜನರಿಗೆ ಅರ್ಥವಾಗುವ ಭಾಷೆ” ಎಂದಿದ್ದಾರೆ. ಇದರ ತಾತ್ಪರ್ಯ ಏನೆಂದರೆ ಒಬ್ಬ ನಿಜವಾದ ಹಿಂದು ಮತ್ತು ನಿಜವಾದ ಭಾರತೀಯ ಆಗಬೇಕೆಂದಿದ್ದರೆ ನೀವು ಹಿಂದಿ ಭಾಷೆಯನ್ನು ಮಾತಾಡಬೇಕು. 2014 ಕ್ಕೆ ಮೊದಲು IBPS ಪರೀಕ್ಷೆಯನ್ನು ಹಲವಾರು ಭಾರತೀಯ ಭಾಷೆಗಳಲ್ಲಿ ನಡೆಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಅದನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರವೇ ನಡೆಸಲಾಯಿತು. ಇದರಿಂದಾಗಿ ಸಾಕಷ್ಟು ಹಿಂದಿಯೇತರ ರಾಜ್ಯಗಳ ಅಭ್ಯರ್ಥಿಗಳಿಗೆ ದ್ಯೋಗ ಅರಸಲು ಅವಕಾಶ ಸಿಗದಾಯಿತು. ಹಿಂದಿ ದಿವಸ್ ಆಚರಣೆಯನ್ನು ಕಡ್ಡಾಯವಾಗಿ ಹಿಂದಿಯೇತರ ರಾಜ್ಯಗಳಲ್ಲೂ ಆಚರಿಸಲಾಗುತ್ತಿದೆ. ಭಾರತ ಬಹು ಭಾಷಾ ದೇಶ. ಒಟ್ಟಾರೆ 1,652 ಸ್ಥಳೀಯ ಭಾಷೆಗಳಿವೆ. 121 ಪ್ರಧಾನ ಭಾಷೆಗಳನ್ನು 10,000 ಕ್ಕೂ ಹೆಚ್ಚು ಜನರು ಮಾತಾಡುತ್ತಾರೆ. ಈ ಕಾರಣಕ್ಕಾಗಿ ದೇಶಕ್ಕೆ ಯಾವುದೇ ರಾಷ್ಟ್ರ ಭಾಷೆ ಎಂಬುದಿಲ್ಲ. ಬದಲಿಗೆ ರಾಷ್ಟ್ರ ಮಟ್ಟದಲ್ಲಿ ಎರಡು ಅಧಿಕೃತ ಭಾಷೆಗಳನ್ನು ಮತ್ತು ರಾಜ್ಯ ಮಟ್ಟದಲ್ಲಿ 22 ಅನುಸೂಚಿತ ಭಾಷೆಗಳನ್ನು ಮಾನ್ಯ ಮಾಡಲಾಗಿದೆ. ದೇಶಾದ್ಯಂತ ಶಾಲೆಗಳಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯವಾಗಿ ಪ್ರಾರಂಭಿಸಲು ಬಿಜೆಪಿ 2022 ರಲ್ಲಿ ಪ್ರಯತ್ನಿಸಿತ್ತಾದರೂ ಪ್ರತಿರೋಧದಿಂದ ಹಿಂಪಡೆಯಲಾಯಿತು. ಒಂದೇ ಭಾಷೆಯನ್ನು ಇಡೀ ದೇಶದ ಮೇಲೆ ಹೇರುವುದು ಅವ್ಯವಸ್ಥೆಗೆ ದಾರಿ ಮಾಡುತ್ತದೆ. ಆ ಒಂದೇ ಭಾಷೆ ಯಾವುದಾಗಿರಬಹುದು?

# ವಾಸ್ತವ

**ಒಕ್ಕೂಟ ವಿರೋಧಿ ನೀತಿಗಳಿಂದ ಸಾವುಗಳು**

ಕಳೆದ ಹತ್ತು ವರ್ಷಗಳಲ್ಲಿ ಹಲವಾರು ಮುಖ್ಯ ನೀತಿಗಳು ಮತ್ತು ಕಾನೂನುಗಳನ್ನು ಆತುರವಾಗಿ ರಾಜ್ಯಗಳೊಂದಿಗೆ ಚರ್ಚೆ ಸಮಾಲೋಚನೆಗಳಿಲ್ಲದೆ ಜಾರಿಗೆ ತರಲಾಗಿದೆ. ಈ ಕೋಷ್ಟಕವು ಇಂತಹ ಆತುರದ ನೀತಿ ಕ್ರಮಗಳಿಂದ ಆಗಿರುವ ಸಾವುಗಳನ್ನು ದಾಖಲಿಸಿದೆ.

| ಸಮಾಲೋಚನೆ ಇಲ್ಲದೆ ತಂದ ನೀತಿ / ಕಾನೂನು | ಸತ್ತ ನಾಗರಿಕರ ಸಂಖ್ಯೆ |
|---|---|
| ನೋಟು ಅಮಾನ್ಯೀಕರಣ | 100 ಕ್ಕೂ ಹೆಚ್ಚು |
| 370 ವಿಧಿಯ ರದ್ದತಿ | 131 ( 2019 ಮತ್ತು 2022 ರ ನಡುವೆ )<br>( ನಾಗರಿಕ ಸಾವು ಮಾತ್ರ ) |
| ಪೌರ ತಿದ್ದುಪಡಿ ಕಾಯ್ದೆ ( ಸಿ ಎ ಎ ) | 35 ಕ್ಕೂ ಹೆಚ್ಚು |
| ಮೊದಲನೇ ರಾಷ್ಟ್ರೀಯ ಲಾಕ್ ಡೌನ್ ( ಕೋವಿಡ್ ನಿಂದ ಅಲ್ಲದ ಸಾವುಗಳು ) | 989 - ಮಾರ್ಚ್ 2020 ರಿಂದ ಜುಲೈ 2020 ರವರೆಗೆ ( 23% ಹಣಕಾಸು ಸಂಕಷ್ಟದಿಂದ ಮತ್ತು 21% ಅಪಘಾತಗಳಿಂದ - ಇವು ಲಾಕ್ ಡೌನ್ ಇಂದ ಘಟಿಸಿದ ಸಾವುಗಳು, ವೈರಸ್ ನಿಂದಲ್ಲ) |
| ಕೃಷಿ ಕಾನೂನುಗಳ ವಿರುದ್ಧ ಕೃಷಿಕರ ಪ್ರತಿಭಟನೆ | ಕನಿಷ್ಠ 702 |
| ಕಲ್ಯಾಣ ಕಾರ್ಯಕ್ರಮಗಳಿಗೆ ಆಧಾರ್ ಹೇರಿಕೆಯಿಂದ | 2015 ಮತ್ತು 2020 ರ ನಡುವೆ 27 ಸಾವುಗಳು |

# ವಾಸ್ತವ

**ಗಂಭೀರ ಸ್ವರೂಪದ ಗಡಿ ಮರು ನಿರ್ಧಾರ**

2026 ರಲ್ಲಿ ನಡೆಯಬೇಕಿರುವ ಜನಗಣತಿ ಆದ ಬಳಿಕ ದೇಶಾದ್ಯಂತ ಗಾಡಿ ಮರು ನಿರ್ಧಾರದ ಪ್ರಕ್ರಿಯೆ ( ಜನಸಂಖ್ಯೆ ಆಧಾರದ ಮೇಲೆ ಸಂಸತ್ತಿನ ಚುನಾವಣಾ ಕ್ಷೇತ್ರಗಳ ಮರು ವಿಂಗಡಣೆ )ಕಾರ್ಯ ಆಗುವುದಿದೆ. ಬೇರೆ ಬೇರೆ ರಾಜ್ಯಗಳು ಬೇರೆ ಬೇರೆ ಮಟ್ಟದ ಸುಧಾರಣೆಗಳನ್ನು ಮಾಡಿವೆ.( ಶಿಕ್ಷಣ, ಆರೋಗ್ಯ, ಉದ್ಯೋಗ, ಮುಂತಾಗಿ ). ತಮಿಳುನಾಡು, ಕರ್ನಾಟಕ, ಕೇರಳ ದಂಥ ದಕ್ಷಿಣ ರಾಜ್ಯಗಳು ತಮ್ಮ ರಾಜ್ಯಗಳಲ್ಲಿ ಜನಸಂಖ್ಯೆ ನಿಯಂತ್ರಣ ಮಾಡುವುದರಲ್ಲಿ ಉತ್ತಮ ಪ್ರಗತಿ ತೋರಿವೆ. ದುರದೃಷ್ಟ ವೇನೆಂದರೆ ಈ ರಾಜ್ಯಗಳಿಗೆ ಪುರಸ್ಕಾರ ಸಿಗುವ ಬದಲು ಮರು ವಿಂಗಡಣೆ ಕಾರ್ಯವು ಇವುಗಳನ್ನು ಶಿಕ್ಷಿಸುತ್ತದೆ. ಭಾರತದ ಸಂವಿಧಾನದ ಒಕ್ಕೂಟ ವ್ಯವಸ್ಥೆಯ ವಿಕೃತ ರೂಪದಂತೆ ಜನಸಂಖ್ಯೆಯನ್ನು ಮಿತಿಗೊಳಿಸಿದ ತಪ್ಪಿಗೆ ಈ ರಾಜ್ಯಗಳು ಸಂಸತ್ತಿನಲ್ಲಿ ಸ್ಥಾನಗಳನ್ನು ಕಳೆದುಕೊಳ್ಳುತ್ತವೆ ಹಾಗೂ ಈ ಸುಧಾರಣೆ ಮಾಡದ ರಾಜ್ಯಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುತ್ತದೆ.

**ಹೆಚ್ಚಿದ ಸುಗ್ರೀವಾಜ್ಞೆಗಳು**

ಸುಗ್ರೀವಾಜ್ಞೆಗಳು ಸಂಸತ್ತಿನಲ್ಲಿ ಚರ್ಚೆಗಳನ್ನು ನಡೆಸದ ಉಪ ಮಾರ್ಗಗಳಂತೆ ಇದ್ದು ತುರ್ತು ಸಮಯದಲ್ಲಿ ಕಾನೂನು ಆಗುತ್ತದೆ. ಉದಾಹರಣೆಗೆ 2020 ರಲ್ಲಿ, ವಿವಾದಿತ 3 ಕೃಷಿ ಕಾನೂನುಗಳನ್ನು ಸುಗ್ರೀವಾಜ್ಞೆಗಳ ಮೂಲಕ ಅಂಗೀಕರಿಸಲಾಯಿತು ಮತ್ತು ಬಹು ಮತವಿಲ್ಲದಿದ್ದರೂ ರಾಜ್ಯಸಭೆಯಲ್ಲಿ ಧ್ವನಿ ಮತದ ಮೂಲಕ ಅವುಗಳನ್ನು ಒಪ್ಪಿಕೊಳ್ಳಲಾಯಿತು. 2004 ಮತ್ತು 2013 ರ ನಡುವೆ ಪ್ರತಿ ವರ್ಷ 6 ಸುಗ್ರೀವಾಜ್ಞೆಗಳಾಗಿದ್ದರೆ,2014 ಮತ್ತು 2023 ರ ನಡುವೆ ಪ್ರತಿ ವರ್ಷ 10 ಇತ್ತು. ಪದೇ ಪದೇ ಸುಗ್ರೀವಾಜ್ಞೆಗಳು ಎಂದರೆ, ರಾಜ್ಯಸಭೆಯಲ್ಲಿ ಚರ್ಚೆಗಳಿಲ್ಲದೇ ಆಗಿರುವುದು ಎಂದು. ಅಂದರೆ ರಾಜ್ಯಗಳನ್ನು ಪ್ರತಿನಿಧಿಸುವ ರಾಜ್ಯಸಭೆಯಲ್ಲಿ ಹೀಗಾಗುವುದು. ಇದು ಒಕ್ಕೂಟ ವಿರೋಧಿ ಸಂಪ್ರದಾಯ. ಸರ್ಕಾರವು ಸಹಕಾರಿ ಒಕ್ಕೂಟ ವ್ಯವಸ್ಥೆಯ ಬಗ್ಗೆ ಮಾತಾಡುತ್ತದೆ. ಆದರೆ ನಾವು ಬಹಳ ವೇಗವಾಗಿ ಹಿಂದಿಯೇತರ ಭಾಷಿಕರಿಗೆ ಸ್ಥಾನಮಾನವಿಲ್ಲದ, ಹಿಂದೂಗಳಲ್ಲದ ಜನರು ಆಸ್ತಿತ್ವವನ್ನೇ ಕಳೆದುಕೊಂಡ, ರಾಜ್ಯಗಳು ಅಪ್ರಸ್ತುತವಾಗುವ ದಿನಗಳತ್ತ ಸಾಗುತ್ತಿದ್ದೇವೆ.

TEN YEARS OF NDA • A GUARANTEE CHECK •

# ಸಂಯುಕ್ತತತ್ತ್ವ

**Email** bahutvakarnataka@gmail.com
**Facebook** Bahutva Karnataka
**Instagram** @bahutvakarnataka
**Twitter** @BahutvaKtka

BAHUTVA KARNATAKA